ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
Bangalore Development Authority

ಸಂಖ್ಯೆ : ಬೆಂ.ಅ.ಪ್ರಾ/ಅಸ/ಅಅ-3/ತಾಸ-4/ಸ್ವಾಧೀನ ಪತ್ರ/ಟಿ-74 /2019-20, ದಿನಾಂಕ : 30/05/2019
No. : Date :

ಅನುಸೂಚಿ-9
(ಉಪವಿಧಿ ಸಂಖ್ಯೆ: 5.5.1)
ಸ್ವಾಧೀನಪಡಿಸಿಕೊಳ್ಳಲು ಅನುಮತಿ ಪತ್ರ

ಅಭಿಯಂತರ ಸದಸ್ಯರವರ ಕಛೇರಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಸರ್ಜಾಪುರ ಮುಖ್ಯರಸ್ತೆ, ಚಿಕ್ಕಕನ್ನಲ್ಲಿ ಗ್ರಾಮದ ಸರ್ವೆ ನಂ. 33/1, 33/2, 33/3 ಮತ್ತು ದೊಡ್ಡಕನ್ನಲ್ಲಿ ಗ್ರಾಮದ ಸರ್ವೆ ನಂ. 26/2, 27/2ಎ(ಪಿ), 27/2ಬಿ(ಪಿ) ರಲ್ಲಿ ನಿರ್ಮಿಸಿರುವ ಬ್ಲಾಕ್-1 ರಲ್ಲಿ (ವಿಂಗ್-ಎ, ಬಿ & ಸಿ) ರಲ್ಲಿ 2ತಳ+ನೆಲ+19 ಮೇಲಂತಸ್ತುಗಳನ್ನೊಳಗೊಂಡ ಒಟ್ಟು 889 ವಸತಿ ಘಟಕಗಳು ಹಾಗೂ ಇ.ಡಬ್ಲ್ಯೂ.ಎಸ್. 99 ವಸತಿ ಘಟಕಗಳು ಒಟ್ಟಾರೆ 988 ವಸತಿ ಘಟಕಗಳ ಬಹುಮಹಡಿ ವಸತಿ ಕಟ್ಟಡಗಳು ಹಾಗೂ ಬ್ಲಾಕ್-2 ರಲ್ಲಿ ಕಟ್ಟಡದಲ್ಲಿ ನೆಲ+02 ಮೇಲಂತಸ್ತುಗಳ ಕ್ಲಬ್ ಹೌಸ್ ಕಟ್ಟಡಕ್ಕೆ ಈ ಹಿಂದೆ ಸಂಖ್ಯೆ: ಬೆಂ.ಅ.ಪ್ರಾ/ನಮ/ಅಸ/ಅಅ-3/ಪೂ/01/2013-14, ದಿನಾಂಕ: 02.04.2013 ರಂದು ನಕ್ಷೆ ಮಂಜೂರಾತಿ ನೀಡಲಾಗಿರುತ್ತದೆ. ತದನಂತರ, ಅಭಿವೃದ್ಧಿದಾರರಾದ ತಾವು ಕಟ್ಟಡದಲ್ಲಿ ಕೆಲವು ಬದಲಾವಣೆಗಳೊಂದಿಗೆ ನಿರ್ಮಾಣವನ್ನು ಪೂರ್ಣಗೊಳಿಸಿರುವುದರಿಂದ, ದಿನಾಂಕ: 24.07.2018 ರಂದು ಮನವಿ ಸಲ್ಲಿಸಿ, ಬ್ಲಾಕ್-1 ರಲ್ಲಿ (ವಿಂಗ್-ಎ, ಬಿ & ಸಿ) ರಲ್ಲಿ 2ತಳ+ನೆಲ+19 ಮೇಲಂತಸ್ತುಗಳನ್ನೊಳಗೊಂಡ ಒಟ್ಟು 825 ವಸತಿ ಘಟಕಗಳು ಹಾಗೂ ಇ.ಡಬ್ಲ್ಯೂ.ಎಸ್. 122 ವಸತಿ ಘಟಕಗಳು ಒಟ್ಟಾರೆ 947 ವಸತಿ ಘಟಕಗಳ ಬಹುಮಹಡಿ ವಸತಿ ಕಟ್ಟಡಗಳಿಗೆ ಯಥಾಸ್ಥಿತಿ ನಕ್ಷೆ ಮಂಜೂರಾತಿ ಮತ್ತು ಸದರಿ ಕಟ್ಟಡಗಳಿಗೆ ಸ್ವಾಧೀನಾನುಭವ ಪತ್ರವನ್ನು ನೀಡುವಂತೆ ಕೋರಿದ್ದು, ಸದರಿ ಕಟ್ಟಡವು ಪೂರ್ಣಗೊಂಡಿರುವುದಾಗಿ, ತಾವು ಹಾಗೂ ನೊಂದಾಯಿತ ವಾಸ್ತು ಶಿಲ್ಪಿ/ಇಂಜನಿಯರ್/ಮೇಲ್ವಿಚಾರಕರು ನೀಡಿದ ಸೂಚನೆ ಆಧಾರದ ಮೇಲೆ ಮತ್ತು ಸದರಿ ಕಟ್ಟಡವನ್ನು ಕಾರ್ಯಪಾಲಕ ಅಭಿಯಂತರರು (ಪೂರ್ವ) ರವರು ದಿನಾಂಕ: 26.09.2018 ರಂದು ತನಿಖೆ ನಡೆಸಿ, ಅಭಿಯಂತರ ಅಧಿಕಾರಿ-3, ಬೆಂ.ಅ.ಪ್ರಾ. ರವರು ಸಲ್ಲಿಸಿರುವ ತನಿಖಾ ವರದಿಯು ತಲುಪಿದ್ದು, ಅದರ ಆಧಾರದಿಂದ ಮೇಲೆ ತಿಳಿಸಿದ "ಬಹುಮಹಡಿ ವಸತಿ" ಕಟ್ಟಡದ ನಿರ್ಮಾಣ ಕಾರ್ಯವು ಸಲ್ಲಿಸಿದ್ದ ಯಥಾಸ್ಥಿತಿ ನಕ್ಷೆಗಳಂತೆ ಪೂರ್ಣಗೊಂಡಿರುವುದು ಮನವರಿಕೆಯಾಗಿದೆ. ಸದರಿ ಬಹುಮಹಡಿ ವಸತಿ ಕಟ್ಟಡಗಳ ಯಥಾಸ್ಥಿತಿ ನಕ್ಷೆಗಳಿಗೆ ಮಂಜೂರಾತಿ ಹಾಗೂ ಸ್ವಾಧೀನಾನುಭವ ಪತ್ರ ನೀಡಲು ಮಾನ್ಯ ಆಯುಕ್ತರವರು ದಿನಾಂಕ: 17.01.2019 ರಂದು ಆದೇಶದ ಸಂಖ್ಯೆ: 5708 ರಂತೆ ಅನುಮೋದನೆ ನೀಡಿರುತ್ತಾರೆ. ಅದರಂತೆ ಯಥಾಸ್ಥಿತಿ ನಕ್ಷೆಗಳಿಗೆ ಸಂಖ್ಯೆ: ಬೆಂ.ಅ.ಪ್ರಾ/ನಮ/ಅಸ/ಅಅ-3/ತಾಸ-4/ಪೂ/11/2019-20, ದಿನಾಂಕ: 22.05.2019 ರಂತೆ ಮಂಜೂರಾತಿ ನೀಡಲಾಗಿರುತ್ತದೆ. ಮುಂದುವರೆದಂತೆ, ಆಯುಕ್ತರವರು ಅನುಮೋದಿಸಿರುವಂತೆ, ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಸರ್ಜಾಪುರ ಮುಖ್ಯರಸ್ತೆ, ಚಿಕ್ಕಕನ್ನಲ್ಲಿ ಗ್ರಾಮದ ಸರ್ವೆ ನಂ. 33/1, 33/2, 33/3 ಮತ್ತು ದೊಡ್ಡಕನ್ನಲ್ಲಿ ಗ್ರಾಮದ ಸರ್ವೆ ನಂ. 26/2, 27/2ಎ(ಪಿ), 27/2ಬಿ(ಪಿ) ರಲ್ಲಿ ನಿರ್ಮಿಸಿರುವ ಬ್ಲಾಕ್-1 ರಲ್ಲಿ (ವಿಂಗ್-ಎ, ಬಿ & ಸಿ) ರಲ್ಲಿ 2ತಳ+ನೆಲ+19 ಮೇಲಂತಸ್ತುಗಳನ್ನೊಳಗೊಂಡ ರಲ್ಲಿ ನಿರ್ಮಿಸಿರುವ ಒಟ್ಟು 825 ವಸತಿ ಘಟಕಗಳು ಹಾಗೂ ಇ.ಡಬ್ಲ್ಯೂ.ಎಸ್. 122 ವಸತಿ ಘಟಕಗಳು ಒಟ್ಟಾರೆ 947 ವಸತಿ ಘಟಕಗಳ ಬಹುಮಹಡಿ ವಸತಿ ಕಟ್ಟಡಗಳಿಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸ್ವಾಧೀನಪಡಿಸಿಕೊಳ್ಳಲು ಈ ಮೂಲಕ ಆಯುಕ್ತರ ಪರವಾಗಿ ಅನುಮತಿ ನೀಡಲಾಗಿದೆ.

-:ಷರತ್ತುಗಳು:-

1) ವಾಹನ ನಿಲುಗಡೆ ಪ್ರದೇಶಕ್ಕೆ ಸಂಪೂರ್ಣ ಸುರಕ್ಷತೆಯನ್ನು ಒದಗಿಸಿ ಸದರಿ ಪ್ರದೇಶವನ್ನು ವಾಹನ ನಿಲುಗಡೆಗೆ ಮಾತ್ರ ಉಪಯೋಗಿಸತಕ್ಕದ್ದು.

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

ಪುಟ ಸಂಖ್ಯೆ: 2 ಕ್ಕೆ ಮುಂದುವರೆದಿದೆ...

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು-560 020.
T. Chowdaiah Road, Kumarapark West, Bangalore - 560 020. Facsimile : 2334 5799, E-mail :bda@vsnl.com

2) ಮಳೆ ನೀರು ಕೊಯ್ಲು ವ್ಯವಸ್ಥೆಯನ್ನು ಉತ್ತಮ್ಮ ರೀತಿಯಿಂದ ನಿರ್ವಹಿಸಿ ಸಂಗ್ರಹಿಸಿದ ನೀರನ್ನು ಗೃಹ ಬಳಕೆಗಾಗಿ ಕಡ್ಡಾಯವಾಗಿ ಉಪಯೋಗಿಸತಕ್ಕದ್ದು.

3) ಒಳಚರಂಡಿ ವ್ಯವಸ್ಥೆಗಾಗಿ ಸ್ಥಾಪಿಸಿದ ಶುದ್ಧೀಕರಣ ಘಟಕವನ್ನು (S.T.P) ಯಾವಗಲೂ ಸುಸ್ಥಿತಿಯಲ್ಲಿರುವುದು ಹಾಗೂ ಶುದ್ಧೀಕರಿಸಿದ ನೀರನ್ನು ಮನೆಗಳಲ್ಲಿನ ಶೌಚಾಲಯ, Gardening ಹಾಗೂ ಗಿಡಮರ Lawn ಗಳಿಗಾಗಿ ಕಡ್ಡಾಯವಾಗಿ ಉಪಯೋಗಿಸತಕ್ಕದ್ದು, ಮತ್ತು ಇದರಿಂದ ಉತ್ಪತ್ತಿಯಾಗುವ Sewage ಪೂರ್ಣ ನೀರನ್ನು ಯಾವುದೇ ಕಾರಣಕ್ಕೂ ಕೆರೆ/ಹಳ್ಳ/ಕಣಿವೆ/ಹೊಳೆಗೆ ಬಿಡತಕ್ಕದಲ್ಲ.

4) ಅಭಿವೃದ್ಧಿದಾರರು ಕಟ್ಟಡ ಸ್ವಾಧೀನಪಡಿಸಿಕೊಂಡ ನಂತರ, ಬಿಬಿಎಂಪಿ / ಬಿಡಿಎ/ ಶಾಸನಬದ್ಧ ಸಂಸ್ಥೆಗಳು ಇನ್ನಾವುದೇ ಶುಲ್ಕಗಳನ್ನು ವಿಧಿಸಿದಲ್ಲಿ ಅದನ್ನು ಸಂದಾಯ ಮಾಡತಕ್ಕದ್ದು.

5) ಅರ್ಜಿದಾರರು ಕಟ್ಟಡಕ್ಕೆ ಬೇಕಾದ ವಿದ್ಯುಚ್ಛಕ್ತಿಯ ಪರ್ಯಾಯ ವ್ಯವಸ್ಥೆಗಾಗಿ ಸೋಲಾರ್ ಉಪಕರಣಗಳನ್ನು ಅಳವಡಿಸಿಕೊಳ್ಳತಕ್ಕದ್ದು.

6) ಕಟ್ಟಡದ ಗುಣಮಟ್ಟ, ಸುರಕ್ಷತೆ, ದೃಡತೆ / ಭದ್ರತೆ ಹಾಗೂ ಕಟ್ಟಡದ ವಿನ್ಯಾಸ ಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವುದೇ ರೀತಿಯಿಂದ ಜವಾಬ್ದಾರರಾಗಿರುವುದಿಲ್ಲ. ಈ ಎಲ್ಲಾ ಅಂಶಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

7) ಅರ್ಜಿದಾರರು ನೀರು ಸರಬರಾಜಿಗಾಗಿ ಸಂಬಂಧಪಟ್ಟ ಇಲಾಖೆಯನ್ನು (BWSSB) ಅವಲಂಬಿಸದೆ ನೀರಿಗಾಗಿ ತಮ್ಮ ಸ್ವಂತ ವ್ಯವಸ್ಥೆ ಮಾಡಿಕೊಳ್ಳುತಕ್ಕದ್ದು.

8) ಅರ್ಜಿದಾರರು ಯಾವುದೇ ರೀತಿಯ ಪ್ಲಾಸ್ಟಿಕ್, ಪೇಪರ್, ಗಾರ್ಬೇಜ್ ಇತ್ಯಾದಿ ತ್ಯಾಜ್ಯಗಳನ್ನು ಸಂಗ್ರಹಿಸಿ Dry waste ಮತ್ತು Wet waste ಅನ್ನು ಬೇರ್ಪಡಿಸಿ ನಿಗಧಿತ ಸ್ಥಳಕ್ಕೆ ಸಾಗಿಸಲು ಸೂಕ್ತ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಿಕೊಳ್ಳತಕ್ಕದ್ದು.

9) ಅಭಿವೃದ್ಧಿದಾರರು ಭದ್ರತಾ ಸಿಬ್ಬಂದಿಯವರನ್ನು ನೇಮಿಸಿ ಕಟ್ಟಡದ ಪ್ರವೇಶ ದ್ವಾರದಲ್ಲಿ ಒಳಬರುವ ಹಾಗೂ ಹೊರಹೋಗುವ ವಾಹನಗಳಿಗೆ ಪ್ರತ್ಯೇಕ ವ್ಯವಸ್ಥೆಯನ್ನು ಕಲ್ಪಿಸಿ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು

10) ಅಭಿವೃದ್ಧಿದಾರರು ಯೋಜನೆಯ ಒಳಾಂಗಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪರಿಸರ ಸಂರಕ್ಷಣೆಗೆ ಸಂಬಂದಿಸಿದ ಎಲ್ಲಾ ಅಗತ್ಯ ಕ್ರಮಗಳನ್ನು ಕಟ್ಟುನಿಟ್ಟಾಗಿ ಕೈಗೊಳ್ಳತಕ್ಕದ್ದು.

11) ಅರ್ಜಿದಾರರು ಕಟ್ಟಡದ ಸ್ವಾಧೀನಾನುಭವ ಪತ್ರ ಪಡೆಯಲು ಯಾವುದೇ ತಪ್ಪು ದಾಖಲೆಗಳನ್ನೇನಾದರು ಸಲ್ಲಿಸಿರುವುದು ಕಂಡುಬಂದಲ್ಲಿ ಅರ್ಜಿದಾರರಿಗೆ ಯಾವುದೇ ಮುನ್ಸೂಚನೆ ನೀಡದೆ ಸ್ವಾಧೀನಾನುಭವ ಪತ್ರವನ್ನು ರದ್ದುಪಡಿಸಲಾಗುವುದು ಹಾಗೂ ಕಾನೂನು ರೀತ್ಯಾ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

12) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ/ಹೊರಡಿಸುವ ಯಾವುದೇ ಷರತ್ತುಗಳಿಗೆ / ಆದೇಶಗಳಿಗೆ ಅರ್ಜಿದಾರರು ಭದ್ಧರಾಗಿರತಕ್ಕದ್ದು.

13) ಸ್ವತ್ತಿಗೆ ಹೊಂದಿಕೊಂಡಂತೆ ಸಾರ್ವಜನಿಕ ಖರಾಬು ಪ್ರದೇಶವಿದ್ದು, ಸದರಿ ಪ್ರದೇಶವನ್ನು ಮುಕ್ತವಾಗಿಡತಕ್ಕದ್ದು, ಸದರಿ ಪ್ರದೇಶದಲ್ಲಿ ಯಾವುದೇ ತರಹದ ಸಾರ್ವಜನಿಕ ನಿರ್ಮಾಣವನ್ನು ಮಾಡುವಂತಿಲ್ಲ ಹಾಗೂ ಇತರೇ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದಲ್ಲ ಮತ್ತು ಅಂತಹ ಪ್ರದೇಶಕ್ಕೆ ಸೂಕ್ತ ರಕ್ಷಣೆ ಒದಗಿಸುವುದು.

14) ಈ ಹಿಂದೆ ಮಂಜೂರಾತಿಯಾದ ನಕ್ಷೆ ಪತ್ರದ ಸಂಖ್ಯೆ: ಬೆಂ.ಅ.ಪ್ರಾ/ನಮು/ಅಸ/ಅಅ-3/ತಾಸ-1/ಪೊ/01/2013-14, ದಿನಾಂಕ: 02.04.2013 ರಲ್ಲಿನ ಬಹುಮಹಡಿ ವಸತಿ ಕಟ್ಟಡವನ್ನು ಮಾತ್ರ ರದ್ದುಪಡಿಸಲಾಗಿದೆ.

ಪುಟ ಸಂಖ್ಯೆ: 3 ಕ್ಕೆ ಮುಂದುವರೆದಿದೆ...

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

15) ಅಭಿವೃದ್ಧಿದಾರರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರು ನೀಡಿರುವ ಸಮ್ಮತಿ (ಸಿ.ಎಫ್.ಇ) ಪತ್ರ ಹಾಗೂ ಅಗ್ನಿ ಶಾಮಕ ಇಲಾಖೆ ರವರು ನೀಡಿರುವ ಕ್ಲಿಯರೆನ್ಸ್ ಪತ್ರದಲ್ಲಿನ ನಿಬಂಧನೆಗಳನ್ನು ಹಾಗೂ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

16) ಅಭಿವೃದ್ಧಿದಾರರು ವಾಹನ ನಿಲುಗಡೆಯ ಸ್ಥಳದಲ್ಲಿ ಕಡ್ಡಾಯವಾಗಿ ವಿದ್ಯುತ್ ವಾಹನಗಳಿಗೆ ಚಾರ್ಜಿಂಗ್ ಪಾಯಿಂಟ್ ಗಳನ್ನು ಅಳವಡಿಸತಕ್ಕದ್ದು.

17) ಅಭಿವೃದ್ಧಿದಾರರು ಸಿಟಿ ಮಾಸ್ಟರ್ ಪ್ಲಾನ್ ಗಳಲ್ಲಿ ವಿದ್ಯುತ್ ವಾಹನಗಳ ಚಾರ್ಜಿಂಗ್ ಗಳಿಗೆ ಸೂಕ್ತವಾದ ಮೀಸಲು ಸ್ಥಳಗಳನ್ನು ಕಾಯ್ದಿರಿಸತಕ್ಕದ್ದು.

18) ಇತ್ತೀಚೀನ ಸರ್ಕಾರಿ ಆದೇಶ ಸಂಖ್ಯೆ:ನಅಇ/536/ಬೆಂಭೂಸ್ವಾ/2017 ದಿನಾಂಕ: 16.03.2019ರ ಅನ್ವಯ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಪೀಲು ಸಂಖ್ಯೆ 5016/2016ರ ಷರತ್ತಿಗೊಳಪಟ್ಟಿರುತ್ತದೆ (ಎನ್.ಜಿ.ಟಿ ಬಫರ್ ಗೆ ಸಂಬಂಧಿಸಿದಂತೆ).

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

ರವರಿಗೆ,

**ಮೆ॥ ಎಸ್.ಜೆ.ಆರ್. ಪ್ರೈಮ್ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್,**
**ನಂ. 01, ಎಸ್.ಜೆ.ಆರ್. ಪ್ರೈಮಸ್,**
**7ನೇ ಮಹಡಿ, ಕೋರಮಂಗಲ,**
**ಬೆಂಗಳೂರು 560095**

ಯಥಾಪ್ರತಿಯನ್ನು ಕಾರ್ಯಪಾಲಕ ಅಭಿಯಂತರು, ಪೂರ್ವ ವಿಭಾಗ, ಬಿ.ಡಿ.ಎ. ವಾಣಿಜ್ಯ ಸಂಕೀರ್ಣ, ಹೆಚ್.ಎಸ್.ಆರ್. ಬಡಾವಣೆ, ಬೆಂಗಳೂರು ರವರ ಮಾಹಿತಿಗಾಗಿ ರವಾನಿಸಿದೆ.